# CHAPTER -6

**ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

1. $6CO_2 + 12H_2O \rightarrow C_6H_{12}O_6 + 6O_2 + 6H_2O$ ಈ ಸಮೀಕರಣದಲ್ಲಿ ಸಸ್ಯಗಳು ತಯಾರಿಸಿದ ಆಹಾರ.
   A) $H_2O$ B) $C_6H_{12}O_6$ C) $CO_2$ D) $O_2$

2. ಸಸ್ಯಗಳಲ್ಲಿ ಅನಿಲ ವಿನಿಮಯಕ್ಕೆ ಕಾರಣವಾದ ರಚನೆ
   A) ಎಪಿಡರ್ಮಿಸ್ B) ಲ್ಯಾಮಿನ C) ಕ್ಲೋರೋಪ್ಲಾಸ್ಟ್ D) ಪತ್ರರಂಧ್ರ

3. ಈ ಜೀವಿಯು ಸಸ್ಯಗಳು/ ಪ್ರಾಣಿಗಳಿಂದ ಅವುಗಳನ್ನು ಕೊಲ್ಲದೇ ಪೋಷಣೆಯನ್ನು ಪಡೆದುಕೊಳ್ಳುತ್ತದೆ.
   A) ಜಿಗಣೆ B) ಇಲಿ C) ಅಮೀಬಾ D) ಇರುವೆ

4. ಬಾಯಿಯಲ್ಲಿ ಆಹಾರ → ಪಿಷ್ಟ → ಸಕ್ಕರೆ ಆಗಿ ಪರಿವರ್ತನೆಯಾಗಲು ಈ ಕಿಣ್ವ ಕಾರಣ
   A) ಪೆಪ್ಸಿನ್ B) ಲೈಪೇಸ್ C) ಅಮೈಲೇಸ್ D) ಎಲ್ಲವೂ

5. ಯೀಸ್ಟನಲ್ಲಿ ಗ್ಲುಕೋಸ್ → ಪೈರುವೇಟ್ → ಎಥನಾಲ್ + $CO_2$ + ಶಕ್ತಿ ಈ ಕ್ರಿಯೆ ನಡೆಯುವುದು
   A) ಆಕ್ಸಿಜನ್‌ನ ಉಪಸ್ಥಿತಿಯಲ್ಲಿ B) ಆಕ್ಸಿಜನ್‌ನ ಅನುಪಸ್ಥಿತಿಯಲ್ಲಿ
   C) ಎರಡೂ ಸರಿ D) ಯಾವುದೂ ಅಲ್ಲ

6. ಜಲಚರಗಳ ಉಸಿರಾಟದ ದರವು ನೆಲಜೀವಿಗಳಲ್ಲಿ ಕಂಡುಬರುವುದಕ್ಕಿಂತ ವೇಗವಾಗಿರುತ್ತದೆ. ಕಾರಣ
   A) ಜಲಚರಗಳಲ್ಲಿ ಆಮ್ಲಜನಕದ ಅಗತ್ಯತೆ ಹೆಚ್ಚಿದೆ B) ನೆಲ ಜೀವಿಗಳಿಗೆ ಹೆಚ್ಚು ಆಮ್ಲಜನಕದ ಅಗತ್ಯವಿಲ್ಲ
   C) ನೀರಿನಲ್ಲಿ ಕರಗಿರುವ ಆಕ್ಸಿಜನ್ ಪ್ರಮಾಣ ಕಡಿಮೆ ಇರುವುದರಿಂದ D) ಎಲ್ಲವೂ ಸರಿ

7. ಮನುಷ್ಯರಲ್ಲಿ ಹೆಚ್ಚು ಕೋಣೆಗಳನ್ನು ಒಳಗೊಂಡಿರುವ ಹೃದಯದಿಂದ ಪ್ರಯೋಜನ/ಗಳು
   A) ಶುದ್ಧ ರಕ್ತ ಅಶುದ್ಧ ರಕ್ತದೊಂದಿಗೆ ಮಿಶ್ರಣವಾಗದಿರುವುದು B) ಹೆಚ್ಚಿನ ಕ್ಷಮತೆಯ ಕಾರ್ಯನಿರ್ವಹಣೆಗೆ
   C) ದೇಹದ ತಾಪ ಎಲ್ಲಾ ಕಾಲದಲ್ಲಿ ಒಂದೇ ರೀತಿ ನಿಯಂತ್ರಿಸಲು D) ಎಲ್ಲವೂ ಸರಿ

8. ಗಾಯವಾದಾಗ ಹೊರಬರುವ ರಕ್ತವನ್ನು ಹೆಪ್ಪುಗಟ್ಟುವಂತೆ ಮಾಡುವ ರಕ್ತದ ಘಟಕ
   A) ಕೆಂಪು ರಕ್ತಕಣ B) ಬಿಳಿ ರಕ್ತಕಣ C) ಕಿರುತಟ್ಟೆ D) ಪ್ಲಾಸ್ಮಾ

9. ಮೂತ್ರಪಿಂಡದ ರಚನಾತ್ಮಕ ಹಾಗೂ ಕಾರ್ಯಾತ್ಮಕ ಮೂಲ ಘಟಕ
   A) ಮೂತ್ರಕೋಶ B) ಮಹಾಅಭಿಧಮನಿ C) ರೀನಲ್‌ಅಭಿಧಮನಿ D) ನೆಫ್ರಾನ್

10. ಸಸ್ಯಗಳಲ್ಲಿನ ತ್ಯಾಜ್ಯ ಪದಾರ್ಥ/ಗಳು ಎಂದರೆ
   A) ಅಂಟು B) ಆಕ್ಸಿಜನ್ C) ಅಂಟು D) ಎಲ್ಲವೂ ಸರಿ

LIVEWORKSHEETS